Impact Factor (SJIF): 6.126 E-ISSN: 2583-1615, P-ISSN: 3049-3498

International Journal of Research in Academic World

**Received**: 10/October/2025 **IJRAW:** 2025; 4(11):183-188 **Accepted:** 20/November/2025

# ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕೇಂದ್ರಗಳಲ್ಲಿ ತಂತ್ರಜ್ಞಾನ ಆದಾರಿತ ಭದ್ರತೆ ಮತ್ತು ಸುರಕ್ಷತಾ ವ್ಯವಸ್ಥೆಗಳ ಅದ್ಯಯನ

**[1]ಡಾ.ಜಗದೀಶ ಎಂ.ವಿ and *[2]ಡಾ.ಜಯಕುಮಾರ**

[1]ಆಯ್ಕೆ ಶ್ರೇಣಿ ಗ್ರಂಥಪಾಲಕರು, ಶ್ರೀ ಡಿ ದೇವರಾಜ ಅರಸು ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ತಾಲೂಕು, ಮೈಸೂರು, ಕರ್ನಾಟಕ, ಭಾರತ.

*[2]ಆಯ್ಕೆ ಶ್ರೇಣಿ ಗ್ರಂಥಪಾಲಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲೂಕು, ಮೈಸೂರು, ಕರ್ನಾಟಕ, ಭಾರತ.

---

**ಸಾರಾಂಶ**

ಈ ಅದ್ಯಯನವು ಗ್ರಂಥಾಲಯದ ಬಳಕೆದಾರರಿಂದ ಉಂಟಾಗುವ ಭದ್ರತಾ ಕ್ರಿಯೆಯನ್ನು ಪರಿಶೀಲಿಸುತ್ತದೆ. ಹಾಗೂ ಇದನ್ನು ಇತರ ದೃಷ್ಟಿಕೋನದಿಂದ ನೋಡಿದರೆ, ಗ್ರಂಥಾಲಯದಿಂದ ವಿಸ್ತಾರವಾಗುವ ಜ್ಞಾನವನ್ನು ಸಂಘಟಿಸುವ ಅಗತ್ಯ ಹೆಚ್ಚುತ್ತದೆ,ಹಾಗೂ ಅದಕ್ಕೆ ಪೂರಕವಾದ ಸಾಕಷ್ಟು ಸೇವೆಗಳನ್ನು ಒದಗಿಸುವ ಅವಸ್ಯಕತೆ ಉದ್ಭವಿಸುತ್ತದೆ. ಇ ಹಿನ್ನೆಲೆಯಲ್ಲಿ ಗ್ರಂಥಾಲಯದ ಭದ್ರತೆ ಎಂಬುದು ಹೆಚ್ಚು ಪ್ರಮುಖವಾಗುತ್ತದೆ ಎಂದು ಹೇಳಬಹುದು. ಈ ಲೇಖನವು ಗ್ರಂಥಾಲಯದ ಮಾಹಿತಿಯನ್ನು ಗೊತ್ತಿರುವ ಸಂಪನ್ಮೂಲಗಳಲ್ಲಿ ಒಂದಾದ ಎಲೆಕ್ಟ್ರಾನಿಕ್ ಕ್ರಮಗಳನ್ನು ಬಳಸಿ ಹೇಗೆ ಭದ್ರಪಡಿಸಬಹುದು ಎಂಬುದನ್ನು ವಿವರಿಸುತ್ತದೆ.

ಈ ಲೇಖನದಲ್ಲಿ ಗ್ರಂಥಾಲಯಕ್ಕೆ ಭದ್ರತಾ ವ್ಯವಸ್ಥೆಯ ಅಗತ್ಯತೆ ಹಾಗೂ ಅಲ್ಲಿ ಅಳವಡಿಸಲಾದ ಭದ್ರತಾ ಸಾಧನಗಳ ವಿಧಗಳನ್ನು ಚರ್ಚಿಸಲಾಗಿದೆ. ಮಾಹಿತಿ ಸಂಪನ್ಮೂಲ ಭದ್ರತೆ ಎಂಬ ಪರಿಕಲ್ಪನೆ ಕುರಿತು ಹಾಗೂ ಮುಂದಿನ ಭವಿಷ್ಯಕ್ಕಾಗಿ ಗ್ರಂಥಾಲಯದ ಸಂಪನ್ಮೂಲಗಳನ್ನು ಭದ್ರಪಡಿಸುವ ಲಾಭಗಳು ಹಾಗೂ ಎಲೆಕ್ಟ್ರಾನಿಕ್ ಉತ್ತಮ ಭದ್ರತಾ ವ್ಯವಸ್ಥೆಯನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗಗಳ ಕುರಿತು ಲಬ್ಯವಿರುವ ಸಾಹಿತ್ಯವನ್ನು ವಿಮರ್ಶಿಸಲಾಗಿದೆ.

**ಕೀವರ್ಡ್:** ಗ್ರಂಥಾಲಯದ ಭದ್ರತೆ, ಎಲೆಕ್ಟ್ರಾನಿಕ್ ಭದ್ರತಾ ವ್ಯವಸ್ಥೆ, ಗ್ರಂಥಾಲಯದ ಸಂಪನ್ಮೂಲ/ಮಾಹಿತಿಯ ಭದ್ರತಾ ಕ್ರಮಗಳು.

---

## 1. ಪರಿಚಯ

ಇಂದಿನ ಗ್ರಂಥಾಲಯಗಳು. ವಿಶೇಷವಾಗಿ ಶೈಕ್ಷಣಿಕ ಗ್ರಂಥಾಲಯಗಳು, ಕಾರ್ಯಲಭ್ಯತೆ, ಸುರಕ್ಷತೆ ಹಾಗೂ ಭೌತಿಕ ಸಮಗ್ರತೆಯನ್ನು ಗ್ರಂಥಾಲಯದಲ್ಲಿ ದೊರೆಯುವ ಸಂಪನ್ಮೂಲಗಳ ರಕ್ಷಣೆ ಮಾಡಲು ಹಾಗೂ ವಿದ್ಯಾರ್ಥಿಗಳಿಂದಾಗುವ ನಿರಂತರ ಕಳವು, ಹಾಳುಮಾಡುವುದು ಮತ್ತು ಸಂಪನ್ಮೂಲಗಳನ್ನು ಸರಿಯಾದ ಜಾಗದಲ್ಲಿ ಇರಿಸದೇ ಬಿಡುವಂತಹ ವರ್ತನೆಗಳು ಇತರ ಬಳಕೆದಾರರಿಗೆ ನಿರಾಶೆಯನ್ನು ಉಂಟುಮಾಡುತ್ತವೆ, ಈ ರೀತಿಯ ಕಾರ್ಯಚಟುವಟಿಕೆಗಳು ಅಂತಿಮವಾಗಿ ಗ್ರಂಥಾಲಯ ಸೇವೆಗಳ ಮೇಲೆ ನಕರಾತ್ಮಕ ಪ್ರತಿಕೂಲ ಪರಿಣಾಮ ಬೀರುತ್ತದೆ.

ಗ್ರಂಥಾಲಯದ ಭದ್ರತೆ ಮತ್ತು ಸುರಕ್ಷತಾ ವೈವಸ್ಥೆಯ ಅನುಷ್ಟಾನವು ಗ್ರಂಥಾಲಯದ ಸಂಪನ್ಮೂಲಗಳನ್ನು ಹಾಳುಮಾಡುವುದು ಹಾಗೂ ಸರಿಯಾದ ಸ್ಥಳದಲ್ಲಿ ಇಡದೇ ಇರುವಂತಹ ಸಮಸ್ಯೆಗಳನ್ನು ಕಡಿಮೆಮಾಡುತ್ತದೆ. ಹಾಗೂ ಬಳಕೆದಾರರಿಗೆ ಗ್ರಂಥಾಲಯವನ್ನು ಸರಿಯಾದ ರೀತಿಯಲ್ಲಿ ಬಳಸುವ ವಿಧಾನವನ್ನು ಗ್ರಂಥಪಾಲಕರು ವಿದ್ಯಾರ್ಥಿಗಳಿಗೆ ಕಲಿಸಬೇಕಾಗುತ್ತದೆ. ಗ್ರಂಥಾಲಯ ಸಿಬ್ಬಂದಿ ಅವಶ್ಯಕವಾಗಿರುವ ವಾಚನಾಲಯ ವಿಭಾಗದ ಕೊಠಡಿಗಳು, ಹಾಗೂ ವಿದ್ಯಾರ್ಥಿಗಳ ಬಳಸಿದ ಪುಸ್ತಕಗಳನ್ನು ಅಥವ ಗ್ರಂಥಾಲಯದ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಮರುಹೊಂದಿಸುವುದನ್ನು ಮಾಡಬೇಕಾಗುತ್ತದೆ.

ಗ್ರಂಥಾಲಯದಲ್ಲಿ ನೆಡೆಯುವ ಅವ್ಯವಹಾರವನ್ನು ತಡೆಗಟ್ಟಲು ನಿರ್ಗಮನ ಪರಿಶೀಲನೆ, ಹೆಚ್ಚಿನ ಪ್ರತಿಗಳ ಪುಸ್ತಕಗಳು ಮತ್ತು ನಿಯತಕಾಲಿಕಗಳು ಒದಗಿಸುವಿಕೆ, ಪರಿಣಾಮಕಾರಿ ಪ್ರಚಾರ ಚಟುವಟಿಕೆಗಳು, ನಿಯಮಿತ ಸ್ಟಾಕ್ ಪರಿಶೀಲನೆ, ಹಾಗೂ ಕ್ರಮೇಣ ಮತ್ತು ದೃಢನಿಶ್ಚಯದೊಂದಿಗೆ ಇ-ಗ್ರಂಥಾಲಯದ ಕಡೆಗೆ ತಿರುಗುವಿಕೆ ಮುಂತಾದ ಕ್ರಮಗಳನ್ನು ಕೈಗೊಳ್ಳಬಹುದು.

ಪ್ರಚಲಿತ ಹಾಗೂ ಇಂದಿನ ತಂತ್ರಜ್ಞಾನದ ವಾತಾವರಣದಲ್ಲಿ ಗ್ರಂಥಪಾಲಕರು ಆಧುನಿಕ ಭದ್ರತಾ ವ್ಯವಸ್ಥೆಗಳನ್ನು

*Corresponding Author: ಡಾ.ಜಯಕುಮಾರ

ಅಳವಡಿಸಿಕೊಳ್ಳಲು ಮುನ್ನೆಚರಿಕೆಯ ಹೆಜ್ಜೆಗಳನ್ನು ಇಡಬೇಕು. ಉದಾಹರಣೆಗೆ RFID, CCTV, Exit Gate Alarm ಸಹಿತ, 3M ತಂತ್ರಜ್ಞಾನ ಮುಂತಾದವುಗಳನ್ನು ಬಳಸಬಹುದು. ಇವು ಚುರುಕು ತಂತ್ರಜ್ಞಾನಗಳಾದರೂ, ಗ್ರಂಥಾಲಯದ ಸಮಸ್ಯೆಗಳ ನಿಜವಾದ ಪರಿಹಾರವು ಸೇವಾ ವಿತರಣೆಯನ್ನು ಪುನರ್ವಿಚಾರಿಸಿ ಉತ್ತಮಗೊಳಿಸುವುದರಲ್ಲಿದೆ.

## 2. ಸಾಹಿತ್ಯ ವಿಮರ್ಶೆ

ಸಾಹಿತ್ರ ವಿಮರ್ಶೆಯು ಸಂಶೋಧನಾ ಪ್ರಬಂಧ ಅಥವ ಸಂಶೋಧನ ಲೇಖನದ ಪ್ರಮುಖ ಅಂಗವಾಗಿದೆ. ಇದು ಈ ಲೇಖನದ ಸಾರಾಂಶವನ್ನು ನೀಡಲಾಗುತ್ತದೆ.

ಚೌಧರಿ ಎಸ್.ಕೆ. (2011) ಅವರ ಅಭಿಪ್ರಾಯದಲ್ಲಿ, ಗ್ರಂಥಪಾಲಕರು ಅಥವಾ ಕಲಾವಿದರು ಅಗ್ನಿ ಅವಘಡ, ನೀರಿನ ತುರ್ತು ಪರಿಸ್ಥಿತಿ, ಹಾಗೂ ಸಂಗ್ರಹಗಳಿಗೆ ಸಂಭವಿಸಬಹುದಾದ ಇತರ ಭಾರೀ ಬೆದರಿಕೆಗಳಿಗೆ ಪ್ರತಿಕ್ರಿಯಿಸಲು ಸಿಬ್ಬಂದಿ ಸಿದ್ಧರಾಗಿವಂತೆ ಸುರಕ್ಷತಾ ಮತ್ತು ಭದ್ರತಾ ಯೋಜನೆಗಳನ್ನು ಹೊಂದಿರಬೇಕು. ಈ ಅಧ್ಯಯನವು ಅಪಾಯ ಮಾದರಿಗಳು, ಸಂಪನ್ಮೂಗಳು ಹಾಗೂ ಉಪಕರಣಗಳ ಮೇಲೆ ಕೇಂದ್ರೀಕರಿಸಿದ್ದು, ಗ್ರಂಥಾಲಯವು ತನ್ನ ಮೌಲ್ಯಮಾಪನಕ್ಕಾಗಿ ಗ್ರಂಥಪಾಲಕರನ್ನು ಬಳಸಿಕೊಳ್ಳುತ್ತದೆ. ಭದ್ರತಾ ವ್ಯವಸ್ಥೆಯ ಮುಖ್ಯ ಉದ್ದೇಶವು ಸುರಕ್ಷಿತ ಮತ್ತು ಭದ್ರತೆಯುಳ್ಳ ವಾತಾವರಣವನ್ನು ಒದಗಿಸುವುದಾಗಿದೆ. ಈ ಅಧ್ಯಯನವು ಗ್ರಂಥಾಲಯದ ಸಿಸಿಟಿವಿ ವ್ಯವಸ್ಥೆ ಮತ್ತು ಭದ್ರತಾ ಸಿಬ್ಬಂದಿಗಳನ್ನು ನೇಮಕ ಮಾಡುವಂತೆ ಶಿಫಾರಸು ಮಾಡುತ್ತದೆ. ಅಲಾರಂ ಸೂಚನೆ ನೀಡುವ ವಿದ್ಯುನ್ಮಾನ ಭದ್ರತಾ ಸಾಧನಗಳ ಬಳಕೆ ಸಂಬಂಧಿತ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ತಲುಪಿಸಲು ಸಹಕಾರಿ. ಪ್ರವೇಶ ನಿಯಂತ್ರಣ ಮತ್ತು ಕೈಯಲ್ಲಿ ನಿಗಾವಳಿ (Hand site surveillance) ದಿಂದ ಗ್ರಂಥಾಲಯದ ವಸ್ತುಗಳ ಕಳವು ಮತ್ತು ಹಾನಿಯನ್ನು ತಡೆಯಬಹುದಾಗಿರುತ್ತದೆ.

ರಾಯ್ ಮತ್ತು ಬಸಾಕ್ (2011) ಅವರ ಅಭಿಪ್ರಾಯದಲ್ಲಿ, ಬಾರ್ಕೋಡಿಂಗ್, ಎಲೆಕ್ಟ್ರಾನಿಕ್ ಮ್ಯಾಗ್ನೆಟಿಕ್ ಸ್ಟ್ರಿಪ್ ಮುಂಥಾದ ಆಧುನಿಕ ತಾಂತ್ರಿಕ ಕ್ರಮಗಳು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಲ್ಲಿ ಬಳಸಲ್ಪಟ್ಟದ್ದು, ಅವು ಬಳಕೆದಾರರಿಗೆ ನೀಡುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಈ ಅಧ್ಯಯನವು ಆಧುನಿಕ ತಂತ್ರಜ್ಞಾನವು ಸ್ಟಾಕ್ ಟೇಕಿಂಗ್, ವಲಯ (Circulation) ಮತ್ತು ಪುಸ್ತಕ ಹುಡುಕಾಟ ಮುಂತಾದ ಗ್ರಂಥಾಲಯ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅನೇಕ ಪ್ರಯೋಜನಗಳನ್ನು ಒದಗಿಸುತ್ತದೆ ಎಂಬುದನ್ನು ಹೈಲೈಟ್ ಮಾಡುತ್ತದೆ. ಈ ಅಧ್ಯಯನವು RFID ತಂತ್ರಜ್ಞಾನವು ಗ್ರಂಥಾಲಯಗಳಲ್ಲಿ ವಸ್ತುಗಳ ಹಸ್ತಚಾಲನೆ, ಪ್ರಕ್ರಿಯೆ ಹಾಗೂ ಭದ್ರತೆಯನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ.

ಹಿಗ್ಗಿನ್ಸ (2015) ರವರ ಅಭಿಪ್ರಾಯದಲ್ಲಿ ಪುಸ್ತಕಗಳ ಕಳವು ಮತ್ತು ಹಾನಿಕಾರಕ ಕೃತ್ಯಗಳ ಹಿಂದೆ ಇರುವ ಕಾರಣಗಳು ಮತ್ತು ಉದ್ದೇಶಗಳನ್ನು ಪರಿಶೀಲಿಸುತ್ತದೆ. ಈ ಅಧ್ಯಯನವು ಪ್ರಸ್ತುತ ಇರುವ ಭದ್ರತಾ ಕ್ರಮಗಳನ್ನು ಹೊರಹಾಕಿ, ಕಳವು ಮತ್ತು ಹಾನಿಯನ್ನು ತಡೆಯಲು ಕೆಲವು ಸಲಹೆಗಳನ್ನು ನೀಡುತ್ತದೆ. ಇಂದಿನ ಗ್ರಂಥಾಲಯಗಳಲ್ಲಿ ಸಂಗ್ರಹ ಭದ್ರತೆಯ ನಿರ್ದಿಷ್ಟ ಅಗತ್ಯಗಳನ್ನು ಹಂಟಿಂಗ್ ತಂತ್ರಜ್ಞಾನ ಸಮರ್ಪಕವಾಗಿ ಪೂರೈಸುತ್ತದೆ ಎಂದು ಇದು ಹೇಳುತ್ತದೆ. ಆದರೆ, ಇಂತಹ ಅವ್ಯವಹಾರಗಳನ್ನು ಅತ್ಯುತ್ತಮ ಎಲೆಕ್ಟ್ರಾನಿಕ್ ಭದ್ರತಾ ವ್ಯವಸ್ಥೆಗಳ ಮೂಲಕ ಮಾತ್ರ ನಿಯಂತ್ರಿಸಲು ಸಾಧ್ಯವಿಲ್ಲ, ಪೋಸ್ಟರ್‌ಗಳು ಮತ್ತು ಸೂಚನಾ ಫಲಕಗಳನ್ನು ಅಳವಡಿಸುವಂತಹ ಜಾಗ್ರತೆಯ ಕ್ರಮಗಳು ಸಹ ಅವಶ್ಯಕವೆಂದು ಈ ಅಧ್ಯಯನ ಶಿಫಾರಸು ಮಾಡುತ್ತದೆ.

## 3. ಅಧ್ಯಯನದ ಉದ್ದೇಶ:

ಈ ಅಧ್ಯಯನವು ಗ್ರಂಥಾಲಯದಲ್ಲಿನ ಸಂಪನ್ಮೂಲಗಳ ಕಳ್ಳತನ, ಹಾನಿ ಹಾಗೂ ತಪ್ಪುಜಾಗದಲ್ಲಿ ಇಡುವುದನ್ನು ತಡೆಯಲು ಬೇಕಾಗಿರುವ ಭದ್ರತಾ ಕ್ರಮಗಳನ್ನುತಂತ್ರಜ್ಞಾನದ ಅಳವಡಿಕೆಯ ಬಗ್ಗೆ ನಿರ್ಧರಿಸುತ್ತದೆ.

- ಎಲೆಕ್ಟ್ರಾನಿಕ್ ತಂತ್ರಜ್ಞಾನ ಬಳಕೆಯ ಸುರಕ್ಷಾ ವ್ಯವಸ್ಥೆಗಳ ವಿಧಗಳನ್ನು ಅಧ್ಯಯನ ಮಾಡುವುದು.
- ಗ್ರಂಥಾಲಯದಲ್ಲಿನ ಸಂಪನ್ಮೂಲಗಳ ರಕ್ಷಣೆ ಹಾಗು ಭದ್ರತೆಗೆ ಬೇಕಾದ ಕ್ರಮಗಳನ್ನು ಅಧ್ಯಯನ ಮಾಡುವುದು.
- ಗ್ರಂಥಾಲಯದ ಸಂಪನ್ಮೂಲಗಳಿಗಾಗಿ ವಿದ್ಯುತ್ ಭದ್ರತಾ ತಂತ್ರಜ್ಞಾನ ಮತ್ತು ಖಾತರಿಯ ವ್ಯವಸ್ಥೆಗಳ ಅನುಕೂಲಗಳ ಅಧ್ಯಯನ ಮಾಡುವುದು.

## 4. ಗ್ರಂಥಾಲಯದ ನೀತಿ ಕಾರ್ಯಗತಗೊಳಿಸುವಿಕೆ:

ಗ್ರಂಥಾಲಯದಲ್ಲಿರುವ ಸಂಪನ್ಮೂಲಗಳ ಸಂಗ್ರಹದಿಂದ ಹಿಡಿದು, ಪುಸ್ತಕಗಳ ವಿತರಣೆ ಮತ್ತು ಹಿಂಪಡೆಯುವವರೆಗೆ ಅವುಗಳನ್ನು ರಕ್ಷಿಸಲು, ಬರಹದ ನೀತಿಯೊಂದಿಗೆ ದಾಖಲಾತಿ ನೀತಿಯನ್ನು ರೂಪಿಸಬೇಕು.

ಗ್ರಂಥಾಲಯದ ನೀತಿ ನಿಯಮಗಳು ಅಲ್ಲಿನ ಕಾರ್ಯಾಚರಣೆಯ ಮೂಲ ಚೌಕಟ್ಟಾಗಿದ್ದು ಅವುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ನಿಯಮಗಳು ಸೂಚಿಸುತ್ತದೆ. ಆದರೆ ವಿಧಾನಗಳು ಗ್ರಂಥಾಲಯದ ಸೇವೆಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ತಿಳಿಸುತ್ತದೆ. ಅದೇ ರೀತಿಯಲ್ಲಿ ನೀತಿಯ ಉದ್ದೇಶವು ಸಂಪನ್ಮೂಲಗಳಿಗೆ ಪ್ರವೇಶ ಒದಗಿಸುವುದು ಮತ್ತು ಅವುಗಳ ಭದ್ರತೆಯನ್ನು ಖಚಿತ ಪಡಿಸಿಕೊಳ್ಳುವುದರ ನಡುವೆ ಸಮತೋಲನವನ್ನು ಸರಿದೂಗಿಸುತ್ತದೆ. ಹಾಗೂ ಭದ್ರತಾ ನಿಯಮಾವಳಿಗಳು ಗ್ರಂಥಾಲಯದ ಕಟ್ಟಡಗಳನ್ನು ಅಗ್ನಿ ಅವಘಡಗಳಿಂದ ರಕ್ಷಿಸಲು ಅಗ್ನಿ ನಂದಕಗಳನ್ನು ಅಳವಡಿಸುವ ಮೂಲಕ ಭದ್ರತೆಗೊಳಿಸುವುದನ್ನು ಒಳಗೊಂಡಿರುತ್ತವೆ. ಈ ಭದ್ರತಾ ವ್ಯವಸ್ಥೆಯಲ್ಲಿ ವಿಮಾನೀತಿಗಳು ಆವರಣೆಗೊಂಡಿರುತ್ತದೆ, ಗ್ರಂಥಾಲಯದ ಸಂಪನ್ಮೂಲಗಳನ್ನು ಅಶಿಸ್ತುಬದ್ಧ ಬಳಕೆದಾರರಿಂದ ರಕ್ಷಿಸುವುದು, ತಂತ್ರಜ್ಞಾನ ಅಭಿವೃದ್ಧಿಯ ಯುಗದಲ್ಲಿ ಗ್ರಂಥಾಲಯದ ಕಟ್ಟಡವು ಒಂದೆಬಾಗಿಲು ಪ್ರವೇಶ ಮತ್ತು ನಿರ್ಗಮನವ್ಯವಸ್ಥೆ ಖಚಿತಪಡಿಸುವುದನ್ನು ಒಳಗೊಂಡಿರುತ್ತದೆ. ಹಾಗೂ ಭದ್ರತೆಯನ್ನು ಹೆಚ್ಚಿಸಲು ಪ್ರತಿಯೊಂದು ವಿಭಾಗದಲ್ಲಿ ಕ್ಯಾಮರಾಗಳು, RFID, ಲೋಹಪತೆ ಸಾಧನಗಳು, ಬಾಗಿಲು ನಿಯಂತ್ರಣಗಳು, ಅಲಾರಂಗಳು, ತಾಪಮಾನ ಸಂವೇದಕಗಳು ಮುಂತಾದ ಎಲೆಕ್ಟ್ರಾನಿಕ್ ಸಾಧನಗಳನ್ನು ಬಳಸುವುದು ಅಗತ್ಯವಾಗಿದೆ.

ಗ್ರಂಥಾಲಯದ ಸಂಪನ್ಮೂಲ ಸಂರಕ್ಷಣೆಯನ್ನ ಬಲಗೊಳಿಸಲು ಅದಕ್ಕೆ ಸರಿಯಾದರೀತಿಯ ನವೀಕೃತ ತರಬೇತಿಯನ್ನು ನಿಯಮಿತವಾಗಿ ಭದ್ರತಾ ಸಿಬ್ಬಂದಿಗೆ ನೀಡುವುದರಿಂದ ಸಂಪನ್ಮೂಲಗಳ ಸುರಕ್ಷತೆಯನ್ನು ಕಾಪಾಡಲು ಸಹಾಯಕವಾಗುತ್ತದೆ. ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಕುರಿತು ಭದ್ರತಾ ಶಿಕ್ಷಣವನ್ನು ಮತ್ತು ತರಬೇತಿಯನ್ನು ಸಹ ಗ್ರಂಥಾಲಯದ ಸಿಬ್ಬಂದಿಗೆ ನೀಡಬೇಕು.

ಗ್ರಂಥಾಲಯದ ಸೂಚನಾ ಪಲಕದಲ್ಲಿಗ್ರಂಥಪಾಲಕರು ಗ್ರಂಥಾಲಯದ ನಿರ್ವಹಣೆಯ ಜೊತೆಗೆ ವಿಶೇಷವಾಗಿ ಸಂಪನ್ಮೂಲಗಳ ಕಳವು ಹಾಗೂ ವಿಕೃತಗೊಳಿಸುವಿಕೆಯ

ಬಗ್ಗೆ ಅನುಷ್ಠಾನ ಸಂಯೋಜನೆ ಮತ್ತು ವರದಿ ಮಾಡುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. ಹಾಗೂ ಭದ್ರತಾ ವಿಷಯಗಳಬಗ್ಗೆಸೂಚನಾಫಲಕಗಳನ್ನು ಗ್ರಂಥಾಲಯದ ಪ್ರತಿಯೊಂದು ವಿಭಾಗಗಳಲ್ಲೂ ಬಳಕೆದಾರರಿಗೆ ತಿಳಿಯುವಹಾಗೆ ಪ್ರಕಟಿಸಬೇಕು.

**5. ಭದ್ರತಾ ಕ್ರಮಗಳಿಗಾಗಿ ಸಿಬ್ಬಂದಿಗೆ ನೀಡುವ ತರಬೇತಿ:**

ಗ್ರಂಥಾಲಯದ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಪರಿಪೂರ್ಣ ವಿನ್ಯಾಸದಲ್ಲಿ ಕಟ್ಟಡ ನಿರ್ಮಿಸಿದರೂ, ಗ್ರಂಥಾಲಯ ಸಿಬ್ಬಂದಿ ಭದ್ರತೆ ಮತ್ತು ಸುರಕ್ಷತೆಯನ್ನು ಕಾಪಾಡುವಲ್ಲಿ ಹಾಗೂ ಯವುದೇ ರೀತಿಯ ಭದ್ರತಾ ಬೆದರಿಕೆಗಳಿಗೆ ಪ್ರತಿಕ್ರಿಯಿಸುವಲ್ಲಿ ಸಮರ್ಪಕ ತರಬೇತಿ ಪಡೆದಿರದಿದ್ದರೆ, ಆ ಸುಸಜ್ಜಿತ ವಿನ್ಯಾಸದ ಗ್ರಂಥಾಲಯ ಕಟ್ಟಡವು ವ್ಯರ್ಥವಾಗುತ್ತದೆ.

ಗ್ರಂಥಾಲಯದ ಭದ್ರತೆ ಮತ್ತು ಸುರಕ್ಷತೆಯನ್ನು ಕಾಪಾಡುವ ದೈನಂದಿನ ಕಾರ್ಯಗಳಿಗೆ ಗ್ರಂಥಾಲಯದ ಸಿಬ್ಬಂದಿಗಳಿಗೆ ತರಬೇತಿ ನೀಡುವುದರ ಜೊತೆಗೆ, ಈ ಕೆಳಗಿನಂತಹ ಪರಿಸ್ಥಿತಿಗಳಲ್ಲಿ ಹೇಗೆ ನೆಡೆದುಕೊಳ್ಳಬೇಕು ಎಂಬುದರ ಕುರಿತು ಸಹ ಗ್ರಂಥಾಲಯ ಸಿಬ್ಬಂದಿಗೆ ತರಬೇತಿ ನೀಡಬೇಕು ಅವುಗಳೆಂದರೆ….

- ಬಳಕೆದಾರರ ಅನುಮತಿಯನ್ನುನಿಯಂತ್ರಿಸುವ ಗ್ರಂಥಾಲಯದ ನಿಯಮಗಳ ಉಲ್ಲಂಘನೆ.
- ಹಿಂಸಾಚಾರದ ಕ್ರಿಯೆ ಅಥವಾ ಹಿಂಸೆಯ ಬೆದರಿಕೆಯ ಸಂಭವನೆ
- ಹಿಂಸೆಗೆ ಸಂಬಂಧಿಸದ ಅಪರಾಧ ಸಂಭವಿಸುವುದು
- ಗ್ರಂಥಾಲಯದ ಭದ್ರತಾ ಸಲಕರಣೆಗಳು: ತುರ್ತು ಪರಿಸ್ಥಿತಿ ನಿರ್ಗಮನ ದಾರಿ, ಎಚ್ಚರಿಕೆ ಪೆಟ್ಟಿಗೆ, ಅಗ್ನಿ ನಂದಕ ಹಾಗೂ ಎಚ್ಚರಿಕೆಯ ಘಂಟೆ.
- ಗ್ರಂಥಾಲಯದ ಕಟ್ಟಡ ವ್ಯವಸ್ಥೆ, ತುರ್ತು ಪರಿಸ್ಥಿತಿಗಳು, ಸೋರಿಕೆಯ ಪೈಪುಗಳು, ಎಲಿವೇಟರ್ ಸ್ಪಾಪೇಜಸ್, ವಿದ್ಯುತ್ ಶಕ್ತಿ ವಿಫಲತೆ ಮುಂತಾದವುಗಳು.
- ಆರೋಗ್ಯ ತುರ್ತು ಪರಿಸ್ಥಿತಿ
- ನೈಸರ್ಗಿಕ ವಿಪತ್ತು-ಭೂಕಂಪ, ಚಂಡಮಾರುತ, ಪ್ರವಾಹ, ನೆರೆ, ಇತ್ಯಾದಿ.

**6. ಗ್ರಂಥಾಲಯದ ಭದ್ರತೆ ಮತ್ತು ಸುರಕ್ಷತಾ ವ್ಯವಸ್ಥೆ:**

ಗ್ರಂಥಾಲಯದ ಪರಿಕಲ್ಪನೆಯಲ್ಲಿ ಸಮಸ್ಯೆಯನ್ನ ತಂದುಕೊಳ್ಳುವುದಕ್ಕಿಂತ ಅದು ಬರದಹಾಗೆ ತಡೆಗಟ್ಟುವುದು ಉತ್ತಮವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಗ್ರಂಥಾಲಯದಲ್ಲಿ ಈ ನಿಲುವು ಪುಸ್ತಕಗಳ ಕಳ್ಳತನ, ಹಾಳುಮಾಡುವುದು ಹಾಗೂ ಸಂಪನ್ಮೂಲಗಳ ತಪ್ಪು ಜಾಗದಲ್ಲಿ ಇಡುವಿಕೆ ಮುಂತಾದ ಸಮಸ್ಯೆಗಳನ್ನು ತಡೆಯಲು ಭದ್ರತಾ ಮತ್ತು ಸುರಕ್ಷತಾ ವ್ಯವಸ್ಥೆಯು ಸಹಾಯಕವಾಗುತ್ತದೆ.

**6.1. ರೇಡಿಯೋ ಅವರ್ತನ ಗುರುತಿಸಲು ತಂತ್ರಜ್ಞಾನ (RFID):**




ಗ್ರಂಥಾಲಯದಲ್ಲಿ ಬಳಸುವ ಹೊಸ ಇನ್ವೆಂಟರಿ ಭದ್ರತಾ ತಂತ್ರಜ್ಞಾನವಾಗಿದ್ದು ಇದನ್ನು ಎಲ್ಲಾರೀತಿಯ ಮಾಹಿತಿಯೊಂದಿಗೆ ಪ್ರೋಗ್ರಾಮ್ ಮಾಡಬಹುದಾದ ಒಂದು ಸಣ್ಣ ರೇಡಿಯೋ ಪ್ರಸಾರಕವಾಗಿದೆ. ಈ ಸಾಧನವು ಮೈಕ್ರೋಡಾಟ್ ನ ಹಾಗೆ ಸಣ್ಣ ಅಥವಾ ಪಾರಂಪರಿಕ ಭದ್ರತಾ ಪಟ್ಟಿಯಂತೆ ದೊಡ್ಡದಾಗಬಹುದಾದ ತಂತ್ರಜ್ಞಾನವಾಗಿದೆ.

ಈ ತಂತ್ರಜ್ಞಾನವನ್ನು ಗ್ರಂಥಾಲಯದ ವಹಿವಾಟುಗಳಾದ ಪುಸ್ತಕ ಗುರುತಿಸುವಿಕೆ, ಸ್ವಯಂ ಪುಸ್ತಕ ಶೀಘ್ರವಾಗಿ ಎರವಲು ಹಾಗೂ ಹಿಂಪಡೆಯುವುದಕ್ಕೆ ಮತ್ತು ಸಿಬ್ಬಂದಿಯಿಂದಾಗುವ ದೋಷಗಳನ್ನು ನಿವಾರಿಸುವುದಕ್ಕಾಗಿ ಬಳಸಲಾಗುತ್ತದೆ. ಇನ್ನೂ ಹಲವಾರು ಪರಿಹಾರಕ್ಕೆ ಈ ತಂತ್ರಜ್ಞಾನವು ಪ್ರಮುಖವಾದ ಪ್ರಯೋಜನಗಳಾಗಿದೆ.

ಗ್ರಂಥಾಲಯಗಳಲ್ಲಿ ಕಳ್ಳತನವನ್ನು ತಡೆಯಲು ತಂತ್ರಜ್ಞಾನವನ್ನು ಬಳಸಬಹುದಾದರೂ, ಇದರ ವಿಧಾನವು ವಿತರಕರ ಪ್ರಕಾರ ಬದಲಾಗುತ್ತದೆ. ಭದ್ರತಾ ವ್ಯವಸ್ಥೆಯನ್ನು ನೇರವಾಗಿ ಚಿಪ್ ನಲ್ಲೇ ಅಳವಡಿಸಬಹುದಾಗಿದೆ, ಅಥವಾ ಭದ್ರತಾ ಗೇಟು ಗಳನ್ನು ಪ್ರತ್ಯೇಕ ಸರ್ವರ್ ಗೆ ಸಂಪರ್ಕಿಸಿ, ಆ ಸರ್ವರ್ ಡೇಟಾಬೇಸ್ ಅನ್ನು ಪರಿಶೀಲಿಸಿ ಎಚ್ಚರಿಕೆ ಗಂಟೆ ನೀಡಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುತ್ತದೆ.

**6.2. ಸುರಕ್ಷಿತ ಕ್ಯಾಮರಾಗಳು:**



ಈ ಸುರಕ್ಷಿತ ಕ್ಯಾಮರಾಗಳು ಗ್ರಂಥಾಲಯದಲ್ಲಿ ಪುಸ್ತಕಗಳ ಕಳವು, ಹಾನಿ, ನಾಶ, ತಪ್ಪುಜಾಗದಲ್ಲಿ ಇಡುವುದು, ಅಶಾಂತಿ, ಅಶಿಸ್ತು, ಹಾಗೂ ಕೆಲವು ಬೇಡವಾದಂತಹ ಕೆಟ್ಟ ವರ್ತನೆಗಳನ್ನು ತಡೆಗಟ್ಟಲು ಸಹಾಯಕವಾಗಿದೆ.

### 6.3. ಅಗ್ನಿಶಾಮಕ ಎಚ್ಚರಿಕೆ ಉಪಕರಣಗಳು



ಅಕಸ್ಮಿಕವಾಗಿ ಗ್ರಂಥಾಲಯದಲ್ಲಿ ಬೆಳಕು, ಹೊಗೆ ಅಥವಾ ಬೆಂಕಿ ಯಾವುದಾದರೂ ಪತ್ತೆ ಹಚ್ಚಿದ ತಕ್ಷಣ ಸಕ್ರಿಯವಾಗುತ್ತದೆ ಹಾಗೂ ಗ್ರಂಥಾಲಯದ ಒದುಗರಿಗೆ ತಕ್ಷಣ ಎಚ್ಚರಿಕೆಯನ್ನು ನೀಡುತ್ತದೆ ಹಾಗೂ ಈ ಸಾಧನವು ದಹನ ಎಚ್ಚರಿಕೆಯ ವ್ಯವಸ್ಥೆಯನ್ನು ಪೂರೈಸುತ್ತದೆ. ಇದರಿಂದ ಗ್ರಂಥಾಲಯದಲ್ಲಿ ಹಾಗುವ ಅನಾಹುತಗಳನ್ನು ತಡೆಯಬಹುದು.

### 6.4. ಕಳ್ಳ ಎಚ್ಚರಿಕೆ ಸಾಧನಗಳು: (Burglar Alarms)




ಗ್ರಂಥಾಲಯದಲ್ಲಿ ಕಳ್ಳ ಎಚ್ಚರಿಕೆ ಸಾಧನಗಳನ್ನು ಅಳವಡಿಸಿದರೆ, ಅನಧಿಕೃತವಾಗಿ ಯಾರಾದರೂ ಒಳನುಗ್ಗಿದರೆ ಪತ್ತೆಹಚ್ಚಬಹುದು. ಸಾಮಾನ್ಯವಾಗಿ ಇವು ಚಲನೆ ಪತ್ತೆ, ಗಾಜು ಒಡೆಯುವುದು ಅಥವಾ ಬಾಗಿಲು/ಕಿಟಕಿ ತೆರೆಯುವುದು ಇತ್ಯಾದಿ ಮೂಲಕ ಕಳ್ಳತನವನ್ನು ಗುರುತುಹಿಡಿದು ಎಚ್ಚರಿಕೆ ನೀಡುವ ಆಧುನಿಕ ಗ್ರಂಥಾಲಯದ ಸುರಕ್ಷತೆ ಹೆಚ್ಚಿಸುವ ಭದ್ರತಾ ವ್ಯವಸ್ಥೆಯಾಗಿರುತ್ತದೆ.

### 6.5. ಗ್ರಂಥಾಲಯದಲ್ಲಿ ಕಳ್ಳತನ ಪತ್ತೆಮಾಡುವ ಬಾಗಿಲು ವ್ಯವಸ್ಥೆ ಸಾಧನ: (Theft Detection Gate System)



ಇದು ಒಂದು ಆಧುನಿಕ ಭದ್ರತಾ ಸಾಧನವಾಗಿದೆ. ಇದು ಗ್ರಂಥಾಲಯದಲ್ಲಿರುವ ಪುಸ್ತಕಗಳು ಹಾಗೂ ಇತರ ಸಂಪನ್ಮೂಲಗಳನ್ನು ಅನಧಿಕೃತವಾಗಿ ಹೊರಗೆ ತೆಗೆದುಕೊಂಡು ಹೋಗುವುದನ್ನು ತಡೆಯಲು ಬಳಸಲಾಗುತ್ತದೆ. ಇದರಿಂದ ಕಳ್ಳತನ ತಡೆಯಬಹುದು, ಸಿಬ್ಬಂದಿಯ ಮೇಲಿನ ಭಾರಕಡಿಮೆಯಾಗುತ್ತದೆ, ಹಾಗೂ ಹೆಚ್ಚುಸುರಕ್ಷತೆಯನ್ನು ಮಾಡಬಹುದಾಗಿರುತ್ತದೆ.

### 6.6. ಗ್ರಂಥಾಲಯದಲ್ಲಿ ಬಯೋಮೆಟ್ರಿಕ್ಸ್



ಗ್ರಂಥಾಲಯದಲ್ಲಿ ಬಯೋಮೆಟ್ರಿಕ್ಸ್ ಎಂದರೆ ಓದುಗರ ವೈಯಕ್ತಿಕ ಲಕ್ಷಣಗಳನ್ನು_ ಬೆರಳಚ್ಚು, ಕಣ್ಣಿನ ಮಣಿಕಟ್ಟು, ಮುಖ ಗುರುತು, ಧ್ವನಿ ಇತ್ಯಾದಿ ಇವುಗಳನ್ನು ಬಳಸಿ ಅವರ ಗುರುತನ್ನು ದೃಢಪಡಿಸುವ ತಂತ್ರಜ್ಞಾನ ಇದರಿಂದ ಗ್ರಂಥಾಲಯದ ಭದ್ರತೆಹೆಚ್ಚುತ್ತದೆ. ಸದಸ್ಯರ ಗುರುತು ನಿಖರವಾಗಿ ಪರಿಶೀಲಿಸಬಹುದು. ಹಾಗೂ ಕಳ್ಳತನ ದುರುಪಯೋಗ ಮತ್ತು ನಕಲಿ ಸದಸ್ಯತ್ವ ತಡೆಯಬಹುದು, ಹಾಗೂ ಆಧುನಿಕ ಡಿಜಿಟಲ್ ಪುಸ್ತಕಾಲಯ ನಿರ್ವಹಣೆಗೆ ಸಹಕಾರಿಯಾಗಿದೆ.

### 6.7. ಗ್ರಂಥಾಲಯದ ಸ್ಮಾರ್ಟ್‌ಕಾರ್ಡ್ (Library Smart Card):




ಗ್ರಂಥಾಲಯದಲ್ಲಿ ಬಳಸುವಸ್ಮಾರ್ಟ್ ಕಾರ್ಡ್ ಒಂದು ತಂತ್ರಜ್ಞಾನ ಆಧಾರಿತ ಗುರುತುಪತ್ರ ಆಗಿದೆ. ಇದು ಸಾಮಾನ್ಯ ಪ್ಲಾಸ್ಟಿಕ್ ಕಾರ್ಡ್ ಆಗಿದ್ದು, ಅದರೊಳಗೆ ಮೈಕ್ರೋಚಿಪ್ ಅಥವಾ ಮ್ಯಾಗ್ನೆಟಿಕ್ ಸ್ಟ್ರಿಪ್ ಇರುತ್ತದೆ. ಇದರಿಂದ ಸ್ವಯಂ ಚಾಲಿತ ಪದ್ಧತಿಯಲ್ಲಿ ಪುಸ್ತಕಗಳನ್ನು ಪಡೆಯಬಹುದು ಹಾಗೂ ಹಿಂತಿರುಗಿಸಬಹುದು ಹಾಗೂ ಇದರಿಂದ ಕಂಪ್ಯೂಟರ್ ಹಾಗೂ ಇಂಟರ್ನೆಟ್ ಸೌಲಭ್ಯ ಪಡೆಯಬಹುದು. ಕಳ್ಳತನ, ಪುಸ್ತಕದ ದುರುಪಯೋಗ, ನಕಲಿ ಸದಸ್ಯತ್ವ ಇತ್ಯಾದಿಗಳನ್ನು ತಡೆಯಲು ಸಹಾಯಕವಾಗಿದೆ.ಹಾಗೂ ಆನ್ ಲೈನ್ ಡೇಟಾಬೇಸ್, ಇ-ಬುಕ್ಸ್, ಇ-ಜರ್ನಲ್ಗಳಿಗೆ ಲಾಗಿನ್ ಆಗಲು ಕಾರ್ಡ್ ಬಳಸಬಹುದು.

### 6.8. ಗ್ರಂಥಾಲಯದ ಭದ್ರತಾ ಸಿಬ್ಬಂದಿ (Security Guard in Library)




ಗ್ರಂಥಾಲಯ ಸುರಕ್ಷತಾ ಭದ್ರತಾ ಸಿಬ್ಬಂದಿಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತಾರೆ ಅವರು ಗ್ರಂಥಾಲಯದ ಆಸ್ತಿಗಳಾದ, ಪುಸ್ತಕಗಳು,, ಪತ್ರಿಕೆಗಳು, ನಿಯತಕಾಲಿಕೆಗಳು ಹಾಗು ಇನ್ನಿತರ ಶೈಕ್ಷಣಿಕ ಸಂಪನ್ಮೂಲಗಳು ಸಂಗ್ರಹವಾಗಿರುತ್ತದೆ,. ಈ ಅಮೂಲ್ಯವಾದ ಆಸ್ತಿಯನ್ನು ಕಾಪಾಡುವುದು ಅತ್ಯಂತ ಮುಖ್ಯವಾದದು ಅದ್ದರಿಂದ ಗ್ರಂಥಾಲಯದಲ್ಲಿ ಭದ್ರತಾ ಸಿಬ್ಬಂದಿಯು ಶಾಂತಿ ಮತ್ತು ಶಿಸ್ತು ಕಾಪಡುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾರೆ ಹಾಗೂ ಓದಿಗರಿಗೆ ನಿಶ್ಚಿಂತವಾಗಿ ಅಧ್ಯಯನ ಮಾಡಲು ಸುರಕ್ಷಿತ ವಾತಾವರನ ದೊರೆಯುತ್ತದೆ.

### 6.9. ಗ್ರಂಥಾಲಯದ ಏಕದ್ವಾರ ಪ್ರವೇಶ ವ್ಯವಸ್ಥೆ (Single Door Entry and Exit in the Library)




ಗ್ರಂಥಾಲಯದಲ್ಲಿ ಏಕದ್ವಾರ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಯಿಂದ ಓದುಗರು ಒಂದೇ ಬಾಗಿಲಿನಿಂದ ಒಳಗೆ ಮತ್ತು ಹೊರಗೆ ಹೋಗುವುದರಿಂದ ಪ್ರತಿ ವ್ಯಕ್ತಿಯ ಚಲನವಲನವನ್ನು ಸುಲಭವಾಗಿ ಗಮನಿಸಬಹುದು, ಹಾಗೂ ಪುಸ್ತಕ ಅಥವಾ ಇತರ ಸಂಪನ್ಮೂಲಗಳನ್ನು ಅನುಮತಿಯಿಲ್ಲದೆ ಹೊರಗೆ ತೆಗೆದುಕೊಂಡು ಹೋಗುವುದನ್ನು ತಡೆಯಬಹುದು ಹಾಗು ಭದ್ರತಾ ಸಿಬ್ಬಂದಿ ಒಂದೇಸ್ಥಳದಲ್ಲಿ ಪರಿಶೀಲಿಸಲು ಮತ್ತು ಓದುಗರನ್ನು ನಿಯಂತ್ರಿಸಲು ಸುಲಭವಾಗುತ್ತದೆ. ಇದರೊಂದಿಗೆ ಶಿಸ್ತು ಕ್ರಮವನ್ನು ಕಾಪಾಡಲು ಹಾಗೂ ಇನ್ನು ಹೆಚ್ಚಿನ ರೀತಿಯಲ್ಲಿ ಸಹಾಯಕವಾಗುತ್ತದೆ.

### 6.10. ಗ್ರಂಥಾಲಯದಲ್ಲಿ ಅಶಾಂತ ಓದುಗರ ವರ್ತನೆ (Disruptive Readers' Behavior in Library)



ಗ್ರಂಥಾಲಯದಲ್ಲಿ ಓದುಗರ ಅಶಾಂತವರ್ತನೆ ಎಂದರೆ, ಶಾಂತವಾತಾವರಣವನ್ನು ಅಸ್ತವ್ಯಸ್ತಗೊಳಿಸುವುದು ಜೋರಾಗಿ ಮಾತನಾಡುವುದು, ನಗುವುದು, ಮೊಬೈಲ್ ಫೋನ್ನಲ್ಲಿ ಮಾತನಾಡುವುದು, ಸಂಗೀತ ಕೇಳುವುದು ಪುಸ್ತಕಗಳನ್ನು ತಪ್ಪಾಗಿ ಬಳಸುವುದು ಅಥವ ಹಾಳುಮಾಡುವುದು, ಕುರ್ಚಿ ಮೇಜುಗಳನ್ನು ಅಸ್ಥಿರವಾಗಿ ಇಡುವುದು, ಊಟ, ಕುಡಿಯುವ ವಸ್ತುಗಳನ್ನು ಗ್ರಂಥಾಲಯಕ್ಕೆ ತರುವುದು ಹಾಗೂ ಇತರ ಓದುಗರಿಗೆ ತೊಂದರೆ ನೀಡುವುದು ಹಾಗೂ ಶಿಸ್ತಿಲ್ಲದ ವರ್ತನೆ ಪ್ರದರ್ಶಿಸುವುದು ಇವು ಇತರ ಓದುಗರಿಗೆ ಅಧ್ಯಯನಕ್ಕೆ ಅಡಚಣೆ ಉಂಟುಮಾಡುವಂತಹದು ಇಂತಹ ಚಟುವಟಿಕೆಗಳಿಗೆ ಸಂಭಂದಿಸಿದಂತೆ ಕೆಲವು ನೀತಿ ನಿಯಮಗಳನ್ನು ರೂಪಿಸುವುದು ಹಾಗೂ ತಡೆಯುವುದು.

## 7. ಉಪಸಂಹಾರ

ಈ ಅಧ್ಯಯನದ ಫಲಿತಾಂಶದಿಂದ ತಿಳಿದುಬರುವುದೇನೆಂದರೆ ಗ್ರಂಥಾಲಯಗಳಲ್ಲಿ ಪುಸ್ತಕಗಳು, ಡಿಜಿಟಲ್ ಡೇಟಾ, ಮತ್ತು ಇತರ ಸಂಪನ್ಮೂಲಗಳನ್ನು ಕಾಪಾಡಲು ಪ್ರಬಲ ಭದ್ರತಾ ಮತ್ತು ಸುರಕ್ಷತಾ ವ್ಯವಸ್ಥೆಗಳು ಅಸ್ತಿತ್ವದಲ್ಲಿವೆ. ಇವುಗಳಲ್ಲಿ ಸಿಸಿಟಿವಿ ಕ್ಯಾಮೆರಾ, RFID (ರೇಡಿಯೋ ಅವರ್ತನ ಗುರುತಿಸಲು ತಂತ್ರಜ್ಞಾನ), ಕಳ್ಳ ಎಚ್ಚರಿಕೆ ಸಾಧನಗಳು, ಗ್ರಂಥಾಲಯದ ಸ್ಮಾರ್ಟ್‌ಕಾರ್ಡ್, ಗ್ರಂಥಾಲಯದ ಏಕದ್ವಾರ ಪ್ರವೇಶ ವ್ಯವಸ್ಥೆ, ಬಯೋಮೆಟ್ರಿಕ್ ಪ್ರವೇಶ, ಕಳ್ಳತನ ಪತ್ತೆ ಗೇಟು ಗಳು, ಅಗ್ನಿ ಅಲಾರ್ಮ್ ವ್ಯವಸ್ಥೆ, ಮತ್ತು ಭದ್ರತಾ ಸಿಬ್ಬಂದಿಯ ನಿಯಂತ್ರಣ ಇತ್ಯಾದಿ ಕ್ರಮಗಳನ್ನು ಅಳವಡಿಸುವುದರಿಂದ ಗ್ರಂಥಾಲಯದಲ್ಲಿ ಹಾಗುವಂತಹ ಸಂಪನ್ಮೂಲಗಳ ಕಳ್ಳತನ, ಹಾನಿ ಹಾಗು ತಪ್ಪು ಸ್ಥಳದಲ್ಲಿ ಪುಸ್ತಕಗಳನ್ನು ಇಡುವುದು ಹಾಗೂ ಸೈಬರ್ ಅಪರಾದ ಇವುಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ.

### References


1. Choudhary SK. Library preservation and conservation. New Delhi: A.P.H. Publishing Corporation, 2011, 188-213
2. Deshmukh NV & Ramesh. Safety measures of dissatisfaction in libraries of college in Maratwada region. *International Journal of Advanced, Engineering and Technology*. 2013; 2(2):148-154.
3. Higgins S. Theft and Vandalism of Books, Manuscripts, and Related Materials in public Libraries, Archives, and Special Collections. Library Philosophy and Practice, 2015, 0-1
4. https://ar.inspiredpencil.com/pictures-2023/disruptive-behavior
5. https://www.atss.in/wireless-burglar-alarms/
6. https://www.cbc.ca/news/canada/manitoba/millennium-library-safety-incidents-spike-in-first-quarterly-report-of-2025-1.7556770
7. https://www.dallassecurity.net/business-security/industries-we-serve/library
8. https://www.enguard-security.com/em-security-system/library-security-system.html
9. https://www.freepik.com/free-photos-vectors/library-security
10. https://www.libbylife.com/blog/2023-02-22-how-to-get-a-library-card-on-the-libby-app-or-from-your-local-branch
11. https://www.welivesecurity.com/2022/09/22/hey-welivesecurity-how-biometric-authentication-work/
12. Parvathamma N & Gavisiddappa A. Students &

librarians' attitude towards books, theft & misplacement in engineering College Libraries. *SRELS Journals of Information Management*, 2001, 38(3)
13. Ranganathan S.R. The five laws of library science. Madras library Association (Madras, India) and Edward Goldstone (London, U.K), 1931.
14. Rfid Solution, Fixed-Frequency Emission Mode, Model Name/Number: Vispl at ₹ 100000/piece in New Delhi
15. Roy & Basak. RFID technology in libraries and information centers: Beginning of a new era. *International Journal of Information Disseminations and Technology*. 2011; 1(4):249-252.
16. Spagnoletti P & Resca A. The duality of Information Security Management: fighting against predictable and unpredictable threats. *Journal of Information System Security*. 2008; 4(3):46-62.